ಮುಧೋಳಕ್ಕೆ ಬಸ್ ಡಿಪೋ ಮಂಜೂರು ಮಾಡುವುದು.

೨೫೩೬. ಶ್ರೀ ಬಿ. ಜಮಖಂಡಿ. (ಮುಧೋಳ್).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮುಧೋಳದಲ್ಲಿ ಬಸ್ ಡಿಪೊ ಮಂಜೂರಾಗಿರುವುದು ನಿಜವೇ ?

ಆ) ಹಾಗಿದ್ದಲ್ಲಿ ಅದರ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು ?

ಇ) ಸದರಿ ಡಿಪೋ ಅಂದಾಜು ವೆಚ್ಚವೆಷ್ಟು ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಮಂತ್ರಿಗಳು).—

ಅ) ಇಲ್ಲ ಆದರೆ ಪರಿಶೀಲನೆಯಲ್ಲಿ ಇದೆ,

ಆ) ಮತ್ತು ಇ) ಪರಿಶೀಲನೆಯಲ್ಲಿದೆ.

ಮುಧೋಳ ಸರ್ಕಾರಿ ಆಸ್ಪತ್ರೆ ' ಕ್ಷ-ಕಿರಣ ' ಘಟಕ ಬಗ್ಗೆ

೨೬೦೩. ಶ್ರೀ ಬಿ. ಜಿ. ಜಮಖಂಡಿ, (ಮುಧೋಳ್).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮುಧೋಳ ಸಾರ್ವಜನಿಕ ಆಸ್ಪತ್ರೆಯಲ್ಲಿ ' ಕ್ಷ ಕಿರಣ ' ಘಟಕ ಒಂದು ಮುಂಜೂರಾಯಿತು ಹಾಗೂ ಇದನ್ನು ಆಳವಡಿಸದೆಯಿರಲು ವಿಳಂಬಕ್ಕೆ ಕಾರಣವೇನು ?

ಆ) ಎಷ್ಟು ದಿನಗಳಲ್ಲಿ ಈ ಘಟಕ ಪ್ರಾರಂಭವಾಗುವ ನಿರೀಕ್ಷೆ ಇದೆ ?

ಶ್ರೀ ಬಿ. ರಾಚಯ್ಯ (ಆರೋಗ್ಯ ಮಂತ್ರಿಗಳು).—

ಅ) ದಿನಾಂಕ ೩೧-೩-೮೬ರಂದು ಕ್ಷ-ಕಿರಣ ಯಂತ್ರ ಒಂದು ಮಂಜೂರಾಗಿದ್ದು ಅದನ್ನು ದಿನಾಂಕ ೧-೧೦-೮೭ರಂದು ಸ್ಥಾಪಿಸಿ ಕೆಲಸ ನಿರ್ವಹಿಸುತ್ತಿದೆ.

ಆ) ಮೇಲಿನ ' ಅ ' ಪ್ರಶ್ನೆಗೆ ಕೊಟ್ಟಿರುವ ಉತ್ತರದಿಂದ ಇದಕ್ಕೆ ಉತ್ತರವಿಲ್ಲ.

ಕರ್ನಾಟಕ ರಾಜ್ಯಕ್ಕೆ ಕೇಂದ್ರದಿಂದ ಬಂದಿರುವ ಗ್ರ್ಯಾಂಟ್ಸ್.

೨೬೦೪. ಶ್ರೀ ಆರ್. ವೆಂಕಟರಾವಯ್ಯ. (ಮುಳಬಾಗಿಲು).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೫೫-೫೬, ೫೬-೫೭, ೫೭-೫೮ನೇ ವರ್ಷಗಳಲ್ಲಿ ಕೇಂದ್ರ ಸರ್ಕಾರದಿಂದ ಕರ್ನಾಟಕ ರಾಜ್ಯಕ್ಕೆ ಬರಬೇಕಾದ ವಿವಿಧ ಕರಗಳ ಅನುದಾನವೆಷ್ಟು ?

ಆ) ಇದುವರೆವಿಗೂ ಬಂದಿರುವ ಅನುದಾನದ ಮೊತ್ತವೆಷ್ಟು ?

ಇ) ಯೋಜನೆ ಹಾಗೂ ಯೋಜನೇತರ ಗ್ರ್ಯಾಂಟ್ಸ್ ಎಷ್ಟು, ಗ್ರ್ಯಾಂಟ್ಸ್ ಕಡಿತಗೊಂಡಿದ್ದರೆ ರಾಜ್ಯ ಸರ್ಕಾರದ ಗ್ರ್ಯಾಂಟ್ಸ್ ಹೆಚ್ಚಿಗೆ ಪಡೆಯಲು ಕೈಗೊಂಡಿರುವ ಕ್ರಮವೇನು ?